ಅಧ್ಯಕ್ಷರು : ಮಾನ್ಯ ಸಚಿವರಾದ ಟಿ.ಬಿ. ಜಯಚಂದ್ರ ಅವರು ಏನು ಹೇಳುತ್ತಾರೆ. ಅದನ್ನು ಮಾತ್ರ ರೆಕಾರ್ಡ್ ಮಾಡಿಕೊಳ್ಳಿ, ಬೇರೆ ಯಾರೂ ಹೇಳಿದ್ದನ್ನು ದಯವಿಟ್ಟು ಬರೆದುಕೊಳ್ಳಬೇಡಿ. ಎಲ್ಲಾ ಸದಸ್ಯರ ಭಾವನೆಗಳನ್ನೂ ನಾನು ಅರ್ಥ ಮಾಡಿಕೊಂಡು ಗಂಟೆಗಟ್ಟಲೆ ಅವಕಾಶ ಕೊಟ್ಟಿದ್ದೇನೆ. ಅದನ್ನು ನೀವು ಈ ರೀತಿ ಉಪಯೋಗಿಸಿಕೊಂಡರೆ ನಾನೇನು ಮಾಡಲಿ?

(ಗೊಂದಲ)

(ಈ ಹಂತದಲ್ಲಿ ಶ್ರೀ ಎ. ರಾಮದಾಸ್ ಅವರು ತಮ್ಮ ಸ್ಥಾನದಿಂದ ಬಾವಿಗೆ ತೆರಳಿದರು).

ಶ್ರೀ ಕೆ. ಶ್ರೀನಿವಾಸಗೌಡ (ಕುದುವನಹಳ್ಳಿ) : ಮಾನ್ಯ ಅಧ್ಯಕ್ಷರೆ, ನಾನು ಕೂಡ ಈ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಲು ನೋಟೀಸ್‌ನ್ನು ಕೊಟ್ಟಿದ್ದೆ.

ಅಧ್ಯಕ್ಷರು : ಮಾನ್ಯ ಶ್ರೀನಿವಾಸಗೌಡರೆ, ತಾವು ಕೇಳಿರುವ ಪ್ರಶ್ನೆಯನ್ನು ಸಂಬಂಧಪಟ್ಟ ಮಂತ್ರಿಗಳಿಗೆ ಕಳುಹಿಸಿದ್ದು, ಅವರಿಂದ ಉತ್ತರ ಬರಲಿ. ಇದನ್ನು ಸೋಮವಾರ ಅಥವಾ ಮಂಗಳವಾರ ತೆಗೆದುಕೊಳ್ಳೋಣ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಮಾನ್ಯ ಚಂದ್ರೇಗೌಡರು ಮಾತನಾಡುತ್ತಾ ನಾನು ಹೇಳಿದ್ದನ್ನು ಶೆಟ್ಟರ್‌ರವರು ಒಪ್ಪುತ್ತಾರೆ, ರಾಮದಾಸ್ ಒಪ್ಪುವುದಿಲ್ಲ ಎಂದು ಪ್ರಸ್ತಾಪ ಮಾಡಿರುವುದು ಸರಿಯಲ್ಲ.

ಅಧ್ಯಕ್ಷರು: ಮಾನ್ಯ ಚಂದ್ರೇಗೌಡರೆ, ಫ್ಲೋರ್ ಲೀಡರ್ಸ್‌ನ್ನು ಕರೆಸಿ ಅರ್ಧಗಂಟೆ ಚರ್ಚೆಸಿ ನಿರ್ಧಾರ ತೆಗೆದುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್ : ಸೋಮವಾರ ಫ್ಲೋರ್ ಲೀಡರ್ಸ್‌ನ್ನು ಕರೆಸಿ ಮಾತನಾಡಲಿ. ಕೋರ್ಟಿಗೆ ಹೋಗುವುದಾದರೆ ಹೋಗಲಿ ಎಂದು ಹೇಳಿದರು. ಅದು ಆಗುವುದು ಬೇಡ.

(ಗೊಂದಲ)

(ಈ ಹಂತದಲ್ಲಿ ಅಧ್ಯಕ್ಷರ ಸೂಚನೆ ಮೇರೆಗೆ ರೆಕಾರ್ಡ್ ಮಾಡಲಿಲ್ಲ)

(ಈ ಹಂತದಲ್ಲಿ ಶ್ರೀ ಎ.ರಾಮದಾಸ್ ಅವರು ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

6. ನಿಯಮ 69ರ ಮೇರೆಗೆ

ರಾಜ್ಯದಲ್ಲಿ ವ್ಯವಸಾಯ ಉತ್ಪನ್ನಗಳ ಬೆಲೆ ಕುಸಿದಿರುವ ಕುರಿತು ಚರ್ಚೆ

(ಗೊಂದಲ)

+ ಶ್ರೀ ಟಿ.ಬಿ. ಜಯಚಂದ್ರ (ಕೃಪಿ ಸಚಿವರು) ; ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು, ವಿಶ್ವೇಶ್ವರ ಹೆಗಡೆ, ಲಕ್ಷ್ಮೀನಾರಾಯಣ, ಬೈರೇಗೌಡರವರು ನಿಲುವಳಿ ಸೂಚನೆ ಮೂಲಕ ಇತ್ತೀಚಿನ ಕೆಲವು ತಿಂಗಳಲ್ಲಿ ಬೆಲೆ ಕುಸಿದ ಸಂದರ್ಭದಲ್ಲಿ ಪರಿಸ್ಥಿತಿಯನ್ನು ಸರ್ಕಾರದ ಗಮನ ಸೆಳೆಯುವ ಮೂಲಕ, ಈ ಕಡೆಯ ಮತ್ತು ಆ ಕಡೆಯ ಸದಸ್ಯರು ಸಹ ಪ್ರಾಮಾಣಿಕವಾಗಿ ಚರ್ಚೆಯಲ್ಲಿ